## ಹೂ ಹಗುರ, ಚಿತ್ತಾಕರ್ಷಕ

# ಮೈಕ್ರೊ ಆ್ಯಂಟಿಕ್



**ಬಹುಬೇಡಿಕೆ ಆ್ಯಂಟಿಕ್ ಆಭರಣ ಇದೀಗ ಹೊಸ ಅವತಾರದೊಂದಿಗೆ ಬಂದಿದೆ. ಮೈಕ್ರೊ ಆ್ಯಂಟಿಕ್ ಎಂದು ಕರೆಯಲಾಗುವ ಈ ಆಭರಣ ಆ್ಯಂಟಿಕ್‌ನ ಸುಧಾರಿತ ರೂಪವಾಗಿದ್ದು, ಹಗುರ ಹಾಗೂ ಆಕರ್ಷಕ ವಿನ್ಯಾಸವನ್ನು ಹೊಂದಿದೆ.**

**■ ಕೃಷ್ಣವೇಣಿ ಪ್ರಸಾದ್ ಮುಳಿಯ**
ಚಿತ್ರಕೃಪೆ: ಮುಳಿಯ ಕೇಶವ ಭಟ್&ಸನ್ಸ್

ಆ್ಯಂಟಿಕ್ ಆಭರಣ ಗೊತ್ತು, ಏನಿದು ಮೈಕ್ರೊ ಆ್ಯಂಟಿಕ್ ಎಂಬ ಕೌತುಕವೇ? ಹಾಗಿದ್ದರೆ ಕೇಳಿ. ಇದು ಆ್ಯಂಟಿಕ್ ಆಭರಣದ ಹೊಸ ರೂಪ. ಅತ್ಯಂತ ಹಗುರವಾದ, ತೊಟ್ಟುಕೊಳ್ಳಲು ಆರಾಮದಾಯಕವಾದ ಈ ಮೈಕ್ರೊ ಆ್ಯಂಟಿಕ್ ಒಡವೆ ಹೊಸದಾಗಿ ಬಂದಿದ್ದು, ಫ್ಯಾಷನ್ ಟ್ರೆಂಡ್ ಅನ್ನೇ ಸೃಷ್ಟಿಸಿದೆ.

ಆ್ಯಂಟಿಕ್ ಆಭರಣಗಳು ಎಲ್ಲರಿಗೂ ಇಷ್ಟವೇ. ಆ್ಯಂಟಿಕ್ ಎಂದರೆ ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಒಡವೆ ವಿನ್ಯಾಸಗಳನ್ನು ಈಗ ಪುನಃ ವಿನ್ಯಾಸಕಾರದಿಂದ ಹೊಸ ರೂಪದಲ್ಲಿ, ಶೈಲಿಯಲ್ಲಿ ಪ್ರದರ್ಶಿಸುವ ಕಲೆ. ಪುರಾತನ ಕಾಲದಲ್ಲಿನ ಆಭರಣದ ನೋಟವನ್ನೇ ಇದು ಹೋಲುತ್ತದೆ. ಇತ್ತೀಚೆಗೆ ಇದು ಇನ್ನೂ ಅದ್ಭುತ ನೋಟವನ್ನು ಕೊಡುತ್ತದೆ. ಜೊತೆಗೆ ಇನ್ನೂ ಹೊಸತನದೊಂದಿಗೆ ಮೈಕ್ರೊ ಆ್ಯಂಟಿಕ್ ಆಭರಣಗಳು ಈಗ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

ಆ್ಯಂಟಿಕ್ ಆಭರಣಗಳು ಸಾಮಾನ್ಯವಾಗಿ 30ರಿಂದ 40 ಗ್ರಾಂ ಇದ್ದರೆ ಸೊಗಸಾದ ಆಭರಣ ಸಿದ್ಧವಾಗುತ್ತದೆ.